# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 1739 |
| **ಸದಸ್ಯರ ಹೆಸರು** | ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 23-03-2020 |
| **ಉತ್ತರಿಸಬೇಕಾದ ಸಚಿವರು** | ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ವಿದ್ಯುನ್ಮಾನ ಮಾಹಿತಿ ತಂತಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |
| **ಪ್ರಶ್ನೆ** | **ಉತ್ತರ** |
| (ಅ) ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳ ನಿಸರ್ಗಧಾಮದಲ್ಲಿ ಪ್ಲ್ಯಾನಿಟೋರಿಯಂಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ; ಈ ಬಗ್ಗೆ ಕೈಗೊಂಡಿರುವ ಪ್ರಗತಿ ಏನು: (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳ ನಿಸರ್ಗಧಾಮದಲ್ಲಿ ಪ್ಲ್ಯಾನಿಟೇರಿಯಂಗೆ ರಾಜ್ಯ ಸರ್ಕಾರದಿಂದ ರೂ. 35.69 ಕೋಟಿ ಅನುದಾನವನ್ನು ನೀಡಲಾಗಿದ್ದು, ಸದರಿ ಅನುದಾನದಿಂದ ಈಗಾಗಲೇ 2018ರ ಮಾರ್ಚ್ 01 ರಂದು ತಾರಾಲಯವನ್ನು ಉದ್ಘಾಟನೆ ಮಾಡಲಾಗಿದೆ. ಈ ಸುಸಜ್ಜಿತ ಹೈಬ್ರಿಡ್ ಪ್ರೊಜೆಕ್ಷನ್ ತಾರಾಲಯದಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಪ್ರದರ್ಶನಗಳನ್ನು ಯಶಸ್ವಿಯಾಗಿ ಪ್ರದರ್ಶಿಸಲಾಗುತ್ತಿದೆ. |
| (ಆ) ಪಿಲಿಕುಳ ನಿಸರ್ಗಧಾಮವನ್ನು ಪ್ರಾಧಿಕಾರ ಮಾಡಬೇಕೆಂದು ಬಿಲ್‌ಅನ್ನು ಮಂಜೂರು ಮಾಡಲಾಗಿದ್ದು, ಈ ಬಗ್ಗೆ ನಿಯಮಗಳನ್ನು ರಚಿಸಲಾಗಿದೆಯೇ; ಇಲ್ಲದಿದ್ದರೆ ಕಾರಣಗಳೇನು; | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2018 ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ನಿಯಮಗಳು, 2019ನ್ನು ರಚಿಸಿ ಅಧಿಸೂಚಿಸಲಾಗಿದೆ. |
| (ಇ) ಪಿಲಿಕುಳ ನಿಸರ್ಗಧಾಮದಲ್ಲಿ ಪ್ರಸ್ತುತ ಇರುವ ತಿಂಗಳೊಂದಕ್ಕೆ ಆದಾಯ ಎಷ್ಟು; ಖರ್ಚು ಎಷ್ಟು; ಎಷ್ಟು ಮಂದಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ; (ವಿವರ ನೀಡುವುದು) | ಪಿಲಿಕುಳ ನಿಸರ್ಗಧಾಮದಲ್ಲಿ ಪ್ರಸ್ತುತ ಸರಾಸರಿ ತಿಂಗಳೊಂದಕ್ಕೆ ರೂ. 32.00 ಲಕ್ಷ ಆದಾಯ ಬರುತ್ತಿದ್ದು, ರೂ.38.00 ಲಕ್ಷಗಳಷ್ಟು ವೆಚ್ಚವಾಗುತ್ತಿದೆ. ಹೀಗೆ ಹೆಚ್ಚುವರಿಯಾಗುವ ವೆಚ್ಚವನ್ನು ದಾನಿಗಳಿಂದ ಪಡೆದ ಸಹಾಯಧನದಿಂದ ಭರಿಸಲಾಗುತ್ತಿದೆ. ಪಿಲಿಕುಳ ನಿಸರ್ಗಧಾಮದಲ್ಲಿ ಒಟ್ಟು 104 ಮಂದಿ ಕಾರ್ಯನಿರ್ವಹಿಸುತ್ತಿದ್ದು, ವಿಭಾಗಗಳಿಗೆ ಅನುಗುಣವಾಗಿ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ:<br><br>• ಆಡಳಿತ ವಿಭಾಗ – 12<br>• ತೋಟಗಾರಿಕೆ ವಿಭಾಗ – 06<br>• ಸಂಸ್ಕೃತಿ ವಿಭಾಗ – 02<br>• ಕುಶಲಕರ್ಮಿ ವಿಭಾಗ – 19<br>• ಜೈವಿಕ ಉದ್ಯಾನ – 24<br>• ಆರ್ಬೋರೇಟಮ್ – 07<br>• ಭದ್ರತಾ ಸಿಬ್ಬಂದಿ – 27<br>• ಸ್ವಚ್ಛತಾ ಸಿಬ್ಬಂದಿ – 07<br>----------<br>ಒಟ್ಟು – 104<br>---------- |

| | |
|---|---|
| | ಮುಂದುವರಿದು, ಪಿಲಿಕುಳ ನಿಸರ್ಗಧಾಮದಲ್ಲಿರುವ ವಿಜ್ಞಾನ ಕೇಂದ್ರ ಮತ್ತು ತಾರಾಲಯ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿಯಡಿ ಕಾರ್ಯ ನಿರ್ವಹಿಸುತ್ತಿದ್ದು, ವಿವರಗಳು ಈ ಕೆಳಗಿನಂತಿದೆ:<br>• ಪ್ರಾದೇಶಿಕ ವಿಜ್ಞಾನ ಕೇಂದ್ರ – 14<br>• ತಾರಾಲಯ – 03<br>• ಭದ್ರತಾ ಸಿಬ್ಬಂದಿ – 22<br>• ಸ್ವಚ್ಚತಾ ಸಿಬ್ಬಂದಿ – 12<br>-------------------<br>ಒಟ್ಟು - 51 |
| ಈ) ಪಿಲಿಕುಳ ನಿಸರ್ಗಧಾಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ "ವಾಟರ್ ಪಾರ್ಕ್" ನಿಂದ ಬರುವ ಆದಾಯ ಎಷ್ಟು; ಇದನ್ನು ಎಷ್ಟು ವರ್ಷಗಳ ಕಾಲ ಗುತ್ತಿಗೆ ನೀಡಲಾಗಿದೆ; ವಿವರ ನೀಡುವುದು. | ಪಿಲಿಕುಳ ನಿಸರ್ಗಧಾಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾಟರ್ ಪಾರ್ಕ್‌ನಿಂದ ಮಾಹೆಯನ ರೂ. 25,000/- ಗಳು ಆದಾಯ ಬರುತ್ತಿದೆ.<br>ಪಿಲಿಕುಳ ನಿಸರ್ಗಧಾಮದಿಂದ ವಾಟರ್ ಪಾರ್ಕ್‌ನ್ನು 20 ವರ್ಷಗಳ ಅವಧಿಗೆ M/s. G.M. Amusement & Leisure Park Ltd, Mangalore ಇವರಿಗೆ ಉಪಗುತ್ತಿಗೆ ನೀಡಲಾಗಿದ್ದು, ದಿನಾಂಕ: 28.04.2022ಕ್ಕೆ ಗುತ್ತಿಗೆಯ ಅವಧಿಯು ಮುಕ್ತಾಯವಾಗುತ್ತದೆ. |
| ಉ) ವಾಟರ್ ಪಾರ್ಕ್‌ನಿಂದ ಪಿಲಿಕುಳಕ್ಕೆ ಆದಾಯ ಬರುತ್ತಿಲ್ಲ ಎಂಬ ದೂರುಗಳಿದ್ದು, ಇದು ನಿಜವೇ; ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಸದರಿ ವಿಷಯದ ಬಗ್ಗೆ ಪ್ರಸ್ತುತದವರೆಗೆ ಪಿಲಿಕುಳ ನಿಸರ್ಗಧಾಮಕ್ಕೆ ಯಾವುದೇ ದೂರುಗಳು ಬಂದಿರುವುದಿಲ್ಲ. |

**(ಐಟಿಬಿಟಿ 82 ಎಸ್‌ಟಿಎಸ್ 2020)**

**(ಡಾ|| ಅಶ್ವಥ್ ನಾರಾಯಣ ಸಿ. ಎನ್)**
ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ
ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ
ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.